ಇ) ಗ್ರಾಮಾಂತರ ಪ್ರದೇಶಗಳಿಗೆ ಅನುಕೂಲಕರವಾದ ಈ ಯೋಜನೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲಾಗುವುದೆ ?

ಶ್ರೀ ಬಿ ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು ಸಚಿವರು) :

ಅ) ಮಳವಳ್ಳಿ ತಾಲ್ಲೂಕಿನ ಕಿರುಗಾವಲು ಮತ್ತು ಹಲಗೂರು ಗ್ರಾಮಗಳನ್ನು ಮೊದಲನೇ ಹಂತದ ಸ್ವಚ್ಛ ಗ್ರಾಮ ಯೋಜನೆಯಡಿ ಆಯ್ಕೆ ಮಾಡಿದ್ದು, ಈವರೆವಿಗೆ ರೂ. 12.15 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಆ) 2004–05ರ ಸಾಲಿನಲ್ಲಿ ಮಳವಳ್ಳಿಯ ಕೊನ್ನಾಪುರ ಗ್ರಾಮವನ್ನು 2ನೇ ಹಂತದ ಸ್ವಚ್ಛ ಗ್ರಾಮ ಯೋಜನೆಯಡಿ ಆಯ್ಕೆ ಮಾಡಲಾಗಿದೆ.

ಇ) ಅಗತ್ಯತೆ ಮತ್ತು ಅನುದಾನದ ಲಭ್ಯತೆ ಆಧರಿಸಿ ಈ ಯೋಜನೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಅನುಷ್ಠಾನಗೊಳಿಸುವುದು ಸರ್ಕಾರದ ಉದ್ದೇಶವಾಗಿದೆ.

1112 (1309) ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಬಿಜಾಪುರ ಮತಕ್ಷೇತ್ರದಲ್ಲಿ ಇರುವ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು ;

ಆ) ಕಾಲೇಜು ಅಗತ್ಯತೆಯನ್ನು ಸರ್ಕಾರ ಮನಗಂಡಿದೆಯೇ ;

ಇ) ಪ್ರಸಕ್ತ ಸಾಲಿನಲ್ಲಿ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜುಗ ಮಂಜೂರು ಮಾಡುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಆರ್. ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಎರಡು.

ಆ) ಬಿಜಾಪುರ ನಗರದಲ್ಲಿ 21 ಮತ್ತು ಇದೇ ತಾಲ್ಲೂಕಿನಲ್ಲಿ ಒಂದು ಅಂದರೆ ಒಟ್ಟು 22 ಕಾಲೇಜುಗಳು ಇರುತ್ತವೆ. ಹೆಚ್ಚಿನ ಕಾಲೇಜಿನ ಅವಶ್ಯಕತೆ ಇರುವುದಿಲ್ಲ.

ಇ) ಬಿಜಾಪುರ ನಗರದಲ್ಲಿ 12 ಖಾಸಗಿ ಅನುದಾನಿತ, 7 ಅನುದಾನರಹಿತ ಹಾಗೂ 2 ಸರ್ಕಾರಿ ಪದವಿ ಪೂರ್ವ ಕಾಲೇಜು ಇರುತ್ತವೆ. (ಒಟ್ಟು 21) ಈ ಕಾಲೇಜುಗಳಲ್ಲಿಯೇ ವಿದ್ಯಾರ್ಥಿಗಳಿಗೆ ಇನ್ನು ಹೆಚ್ಚಿನ ಪ್ರವೇಶಾವಕಾಶವಿರುತ್ತದೆ. ಆದ್ದರಿಂದ ಬಿಜಾಪುರ ನಗರದಲ್ಲಿ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾರಂಭಿಸುವ ಅಗತ್ಯತೆ ಇರುವುದಿಲ್ಲ.

1113 (1310) ಶ್ರೀ ಅಪ್ಪ ಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಮಹಿಳಾ ವಿಶ್ವ ವಿದ್ಯಾನಿಲಯವನ್ನು ಹೊಂದಿರುವ ಬಿಜಾಪುರ ನಗರದಲ್ಲಿ ಸರ್ಕಾರ ಪ್ರಥಮ ದರ್ಜೆ ಕಾಲೇಜು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಕಾಲೇಜು ಅಗತ್ಯತೆಯನ್ನು ಸರ್ಕಾರ ಮನಗಂಡಿದೆಯೇ ;

ಇ) ಪ್ರಸಕ್ತ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಂಜೂರು ಮಾಡುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಆ) ಪಡೆಯಲಾಗಿದೆ.

ತಾವರೆಕೆರೆ, ಚೋಳನಾಯಕನಹಳ್ಳಿ, ಚಿಕ್ಕನಹಳ್ಳಿ ಚುಂಚನಕುಪ್ಪೆ, ಈ ಗ್ರಾಮ ಪಂಚಾಯತಿಗಳಲ್ಲಿ, ಗ್ರಾಮ ಸಭೆಗಳು ನಡೆದಿದ್ದು, ಸದರಿ ಗ್ರಾಮ ಸಭೆಗಳಲ್ಲಿ, ನಿವೇಶನ ರಹಿತರ ಪಟ್ಟಿಗಳು ಅನುಮೋದನೆಗೊಂಡಿದ್ದು, ಅವುಗಳನ್ನು ಗ್ರಾಮ ಪಂಚಾಯಿತಿಯ ಠರಾವುಗಳ ಮೂಲಕ ಧೃಡೀಕರಿಸಲಾಗಿದೆ. ಈ ಗ್ರಾಮ ಪಂಚಾಯತಿಗಳಲ್ಲಿ ಗ್ರಾಮ ಸಭೆ ನಡೆದ ದಿನಾಂಕಗಳ ವಿವರ ಕೆಳಗಿನಂತಿದೆ.

ಗ್ರಾಮ ಪಂಚಾಯತಿಯ ಹೆಸರು	ಗ್ರಾಮ ಸಭೆ ನಡೆದ ದಿನಾಂಕ
ತಾವರೆಕೆರೆ	30–12–2003
ಚೋಳನಾಯಕನಹಳ್ಳಿ	24–12–2003
ಚಿಕ್ಕನಹಳ್ಳಿ	14–01–2004
ಚುಂಚನಕುಪ್ಪೆ	24–12–2003

ಇ) ನಕ್ಷೆ ತಯಾರಿಸಲಾಗಿದೆ.

ಈ) ಲೇಔಟ್ ಪ್ಲಾನ್ ಮಾಡಿರುವುದಿಲ್ಲ. ನಕ್ಷೆಯ ಅಧಾರದ ಮೇಲೆ ಹಂಚಿಕೆ ಮಾಡಲಾಗಿದೆ.

ಉ) ಬಂದಿರುತ್ತದೆ.

ಊ) ಈ ವಿಚಾರದಲ್ಲಿ ಅನುಷ್ಠಾನಾಧಿಕಾರಿಗಳ ಸಭೆಯನ್ನು ನಡೆಸಿ ಈ ಎಲ್ಲಾ ನಿವೇಶನಗಳ ಹಕ್ಕುಪತ್ರಗಳನ್ನು ತಾತ್ಕಾಲಿಕವಾಗಿ ರದ್ದುಪಡಿಸಲಾಗಿದೆ ಮತ್ತು ಪುನರ್ ಪರಿಶೀಲನೆಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಋ) ತಾವರೆಕೆರೆ ಹೋಬಳಿಯಲ್ಲಿ ನಿವೇಶನ ಹಂಚಿಕೆಯಲ್ಲಿ ಅಕ್ರಮ ನಡೆದಿರುವುದಾಗಿ ಮಾಗಡಿ ಕ್ಷೇತ್ರದ ವಿಧಾನಸಭಾ ಸದಸ್ಯರು ದಿನಾಂಕ: 01–06–2004 ರಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರು, ತತ್ಸಮಭಂದವಾಗಿ ಜಿಲ್ಲಾಧಿಕಾರಿಗಳು ದಿನಾಂಕ 29–11–2004 ರಂದು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಬೆಂಗಳೂರು ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿಗಳು ಮತ್ತು ಬೆಂಗಳೂರು ದಕ್ಷಿಣ ಉಪವಿಭಾಗಾಧಿಕಾರಿಗಳು ಬೆಂಗಳೂರು ದಕ್ಷಿಣ ತಾಲ್ಲೂಕು ತಹಸೀಲ್ದಾರ್ ಹಾಗೂ ಬೆಂಗಳೂರು ದಕ್ಷಿಣ ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅದಿಕಾರಿಗಳು ತಾವರೆಕೆರೆ ಹೋಬಳಿಗೆ ಸಂಬಂಧಿಸಿದ ಗ್ರಾಮ ಪಂಚಯತಿ ಕಾರ್ಯದರ್ಶಿಗಳು, ಚೋಳನಾಯ್ಕನಹಳ್ಳಿ, ತಾವರೆಕೆರೆ ಚಿಕ್ಕನಹಳ್ಳಿ, ಚುಂಚನಕುಪ್ಪೆ ಗ್ರಾಮಪಂಚಾಯ್ತಿ ಅಧ್ಯಕ್ಷರುಗಳ ಸಭೆ ಕರೆದು ಕೂಲಂಕುಷವಾಗಿ ಚರ್ಚಿಸಿ, ನಿವೇಶನ ಹಂಚಿಕೆಯಲ್ಲಿನ ಅವ್ಯವಹಾರವನ್ನು ಪತ್ತೆ ಹಚ್ಚಿ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲು ಕ್ರಮತೆಗೆದುಕೊಂಡಿದ್ದು ವಿಷಯ ಸಧ್ಯ ಪರಿಶೀಲನಾ ಹಂತದಲ್ಲಿದೆ.

ಋ) ಬಂದಿರುತ್ತದೆ.

ಈ ಬಗ್ಗೆ ಪುನರ್ ಪರಿಶೀಲನೆ ನಡೆಸುತ್ತಿದ್ದು, ಅರ್ಹ ಫಲಾನುಭವಿಗಳಿಗೆ ಮಾತ್ರ ಲೇಔಟ್ ರಚಿಸಿದ ನಂತರ ಹಕ್ಕು ಪತ್ರಗಳನ್ನು ಹೊಸದಾಗಿ ವಿತರಿಸಲು ಕ್ರಮ ಕೈಕೊಳ್ಳಲಾಗುವುದು.